**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-315/2022**

ಪಿ.ಡಬ್ಲ್ಯೂಃ- 2
ಸಿ.ಡಬ್ಲ್ಯೂಃ- 2

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಮಮತ |
| ಗಂಡನ ಹೆಸರುಃ | : | ಜಯರಾಂ |
| ವಯಸ್ಸುಃ | : | 37 ವರ್ಷ |
| ವೃತ್ತಿಃ | : | ಗೃಹಿಣಿ |
| ವಾಸಃ | : | ಕೋಡಿಹಳ್ಳಿ ಗ್ರಾಮ, ಹಾಸನ ತಾಃ. |

**ದಿನಾಂಕಃ 13-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಮೃತ ಚೈತ್ರ ನನ್ನ ತಂಗಿ. 1ನೇ ಆರೋಪಿ ಜಗದೀಶ ಚೈತ್ರ ರವರ ಗಂಡ. 2ನೇ ಆರೋಪಿ ರಂಗಸ್ವಾಮಿ 1ನೇ ಆರೋಪಿತನ ಅಣ್ಣ. 3ನೇ ಆರೋಪಿ ಪುಟ್ಟೇಗೌಡ ಆರೋಪಿ-1 ಹಾಗೂ 2 ರವರ ತಂದೆ. ಚೈತ್ರ ಮೃತಪಡುವ 7 ವರ್ಷಗಳ ಹಿಂದೆ ಆಕೆಯ ವಿವಾಹವು 1ನೇ ಆರೋಪಿ ಜಗದೀಶನೊಂದಿಗೆ ನೆರವೇರಿತ್ತು. ಮದುವೆಯಾಗಿ ಒಂದು ವರ್ಷದವರೆಗೆ ನನ್ನ ತಂಗಿ ಚೈತ್ರ ಹಾಗೂ ಆಕೆಯ ಗಂಡ ಜಗದೀಶ ಅನ್ಯೋನ್ಯವಾಗಿದ್ದರು. ನಂತರ ಚೈತ್ರ ರವರ ಗಂಡನಾದ ಜಗದೀಶ ಹಾಗೂ ಜಗದೀಶನ ಸಹೋದರನಾದ ರಂಗಾಸ್ವಾಮಿ ಹಾಗೂ ಜಗದೀಶನ ತಂದೆಯಾದ ಪುಟ್ಟೇಗೌಡರು ಚೈತ್ರಳಿಗೆ ಹೆಚ್ಚಿನ ವರದಕ್ಷಿಣೆ ಹಣ ಪಡೆದು ಬರುವಂತೆ ಹೊಡೆದು ಬಡಿದು ಕಿರುಕುಳ ನೀಡುತ್ತಿದ್ದರು. ನನ್ನ

ತಂಗಿ ಚೈತ್ರ ಆರೋಪಿಗಳು ಆಕೆಗೆ ನೀಡುತ್ತಿರುವ ಕಿರುಕುಳದ ಬಗ್ಗೆ ನಮ್ಮ ತಾಯಿಗೆ ಫೋನ್ ಮಾಡಿ ಹೇಳುತ್ತಿದ್ದಳು. ನಮ್ಮ ತಾಯಿ ಆರೋಪಿಗಳು ಚೈತ್ರಳಿಗೆ ನೀಡುತ್ತಿರುವ ಹಿಂಸೆಯ ಬಗ್ಗೆ ಹೇಳುತ್ತಿದ್ದರು. ನಂತರ ನಮ್ಮ ತಾಯಿ, ನನ್ನ ಭಾವ ಉಮೇಶ, ನಮ್ಮ ಗ್ರಾಮದ ಕೀರ್ತಿ, ಕಿತ್ತನಗೆರೆ ಗ್ರಾಮದ ಸತ್ಯನಾರಾಯಣ ಎಲ್ಲರೂ ಸೇರಿ ಆರೋಪಿಗಳ ಮನೆಗೆ ಹೋಗಿ ಪಂಚಾಯಿತಿ ಮಾಡಿ ಆರೋಪಿಗಳಿಗೆ ಬುದ್ದಿವಾದ ಹೇಳಲಾಗಿರುತ್ತದೆ ಆರೋಪಿಗಳಿಗೆ ಬುದ್ದಿವಾದ ಹೇಳಿದರೂ ಸಹ ಅವರುಗಳು ಸರಿ ಹೋಗಲಿಲ್ಲ. ಆರೋಪಿಗಳ ನನ್ನ ತಂಗಿ ಚೈತ್ರಗಳಿಗೆ ಕೆಟ್ಟ ಕೆಟ್ಟ ಮಾತುಗಳಿಂದ ಬೈಯುತ್ತಿದ್ದರು. ಆರೋಪಿಗಳ ಹಿಂಸೆ ತಾಳಲಾರದೆ ಚೈತ್ರ ತವರು ಮನೆಗೆ ಬಂದು ಇದ್ದಳು. ಮಹಾಲಯ ಅಮವಾಸ್ಯೆ ಹಬ್ಬದ ಪ್ರಯುಕ್ತ ಚೈತ್ರ ಗಂಡನ ಮನೆಗೆ ಹೋಗಿದ್ದಳು. ದಿ:29.09.2019 ರ ರಾತ್ರಿ 8.30 ಗಂಟೆ ಸಮಯದಲ್ಲಿ ಚೈತ್ರ ನನ್ನ ಅಕ್ಕ ತೇಜಳಿಗೆ ಹಾಗೂ ನಮ್ಮ ತಾಯಿಗೆ ಫೋನ್ ಮಾಡಿ ಆರೋಪಿಗಳು ತನಗೆ ಹಿಂಸೆ ಕೊಡುತ್ತಿದ್ದಾರೆ ದೇವರ ಪೂಜೆ ಮಾಡಲು ಬಿಡುತ್ತಿಲ್ಲ ಎಂದು ಹೇಳಿದಳು. ಆರೋಪಿಗಳು ವರದಕ್ಷಿಣೆ ತರುವಂತೆ ತನಗೆ ಹೊಡೆಯುತ್ತಿದ್ದಾರೆ ಎಂದು ತಿಳಿಸಿದಳು. ನಂತರ ಮರುದಿನ ಬೆಳಿಗ್ಗೆ 1ನೇ ಆರೋಪಿ ಜಗದೀಶ ನಮಗೆಲ್ಲಾ ಫೋನ್ ಮಾಡಿ ಚೈತ್ರ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾಳೆ ಎಂದು ತಿಳಿಸಿರುತ್ತಾನೆ. ವಿಷಯ ತಿಳಿದ ನಾವು ಲಿಂಗನಕೊಪ್ಪಲು ಆರೋಪಿಗಳ ಮನೆಗೆ ಹೋಗಿ ನೋಡಿದಾಗ ಚೈತ್ರ ಅಡುಗೆ ಮನೆಯ ಕೋಣೆಯಲ್ಲಿ ಸೀರೆಯಿಂದ ನೇಣು ಹಾಕಿಕೊಂಡು ನೇತಾಡುತ್ತಿರುವುದು ಕಂಡು ಬಂತು. ಲಿಂಗನಕೊಪ್ಪಲು ಗ್ರಾಮದ ಮನೆಯಲ್ಲಿ ಆರೋಪಿಗಳು ಕಂಡು ಬರಲಿಲ್ಲ. ನಂತರ ನಾವು ಪೊಲೀಸ್ ಠಾಣೆಗೆ ಹೋಗಿ ಮಾಹಿತಿ ನೀಡಿರುತ್ತೇವೆ. ನಂತರ ಮೃತ ಚೈತ್ರ ರವರ ದೇಹವನ್ನು ಹಳೇಬೀಡು ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಗಿರುತ್ತದೆ. ಆರೋಪಿಗಳ

ಹಿಂಸೆಯಿಂದ ಚೈತ್ರ ನೇಣು ಬಿಗಿದುಕೊಂಡು ಮೃತಪಟ್ಟಿರುತ್ತಾಳೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನ ಹೇಳಿಕೆಯನ್ನು ಪಡದಿರುತ್ತಾರೆ. ನಿಪಿ–3 ನನ್ನ ತಂಗಿ ಮೃತ ಚೈತ್ರ ರವರ ಮೃತದೇಹದ ಫೋಟೋ ಆಗಿರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

2. 3ನೇ ಆರೋಪಿ ಪುಟ್ಟೇಗೌಡ ನಮ್ಮ ಸ್ವಂತ ಸೋದರ ಮಾವ ಎಂದರೆ ಸರಿ. ಆರೋಪಿಗಳು ನನ್ನ ಸ್ವಂತ ಸೋದರ ಮಾವನ ಮಕ್ಕಳು ಎಂದರೆ ಸರಿ. ಈ ಪ್ರಕರಣದಲ್ಲಿ ಆರೋಪಿಗಳ ಮೇಲೆ ದೂರು ದಾಖಲಾದ ನಂತರ 3ನೇ ಆರೋಪಿ ಪುಟ್ಟೇಗೌಡ ರೈಲಿಗೆ ಸಿಲುಕಿ ಮೃತಪಟ್ಟಿರುತ್ತಾರೆ. ಪುಟ್ಟೇಗೌಡರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆಂದರೆ ನನಗೆ ತಿಳಿದಿಲ್ಲ. ಚೈತ್ರ ನನಗೆ ಫೋನ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮೊದಲು ಆಕೆ ಫೋನ್ ಮಾಡುತ್ತಿದ್ದಳು. ಚೈತ್ರಳ ಬಗ್ಗೆ ನಮ್ಮ ತಾಯಿ ಹೇಳಿದ ಮೇರೆಗೆ ಮಾತ್ರ ನನಗೆ ತಿಳಿದು ಬಂದಿರುತ್ತದೆ ಎಂದರೆ ಕೆಲವೊಮ್ಮೆ ಚೈತ್ರ ಸಹ ಸಿಕ್ಕಿದಾಗ ನನಗೆ ಹೇಳಿರುತ್ತಾಳೆ. ಚೈತ್ರ ಸಿಕ್ಕಿದಾಗ ಆಕೆಯ ಕುಟುಂಬದ ಬಗ್ಗೆ ನನಗೆ ಹೇಳುತ್ತಿದ್ದಳು ಎಂದು ನಾನು ಪೊಲೀಸರಲ್ಲಿ ನೀಡಿರುವ ಹೇಳಿಕೆಯಲ್ಲಿ ಬರೆಸಿಲ್ಲ. ನಾನು ಕಳೆದ 5 ವರ್ಷಗಳಿಂದ ಫೋನ್ ಬಳಸುತ್ತಿದ್ದೇನೆಂದರೆ ಸರಿ. ನಮ್ಮ ತಾಯಿ ಸುಮಾರು 2–3 ವರ್ಷದಿಂದ ಫೋನ್ ಬಳಸುತ್ತಿದ್ದಾರೆಂದರೆ ಸರಿ. ಚೈತ್ರ ಆಕೆಯ ಗಂಡನ ಜೊತೆ ಆಂಧ್ರದಲ್ಲಿ ವಾಸವಾಗಿದ್ದು ಆಕೆಯ ಗಂಡ ಬೇಕರಿ ನಡೆಸುತ್ತಿದ್ದ ಎಂದರೆ ಸರಿ. 2ನೇ ಆರೋಪಿ ರಂಗಸ್ವಾಮಿ ಸಹ ಬೇರೆ ಊರಿನಲ್ಲಿ ಬೇಕರಿ ಕೆಲಸಕ್ಕೆ ಇದ್ದ ಎಂದರೆ ಸರಿ. ಊರಿನಲ್ಲಿ 3ನೇ ಆರೋಪಿ ಪುಟ್ಟೇಗೌಡ ಮಾತ್ರ ವಾಸವಾಗಿದ್ದರು ಎಂದರೆ ಸರಿ. ಹಬ್ಬ ಹರಿದಿನಗಳಿಗೆ ಆರೋಪಿ–1 ಹಾಗೂ 2 ಊರಿಗೆ ಬಂದು ಹೋಗುತ್ತಿದ್ದರು ಎಂದರೆ ಸರಿ. ಮಹಾಲಯ ಅಮವಾಸ್ಯೆಗಿಂತ 4 ತಿಂಗಳ ಮೊದಲು

ಚೈತ್ರ ತವರು ಮನೆಗೆ ಬಂದಿದ್ದಳು ಎಂದರೆ ಸರಿ.

3. ಚೈತ್ರಗಳಿಗೆ ಉಬ್ಬಸದಂತಹ ಯಾವುದೇ ಕಾಯಿಲೆ ಇರಲಿಲ್ಲ. ನಮ್ಮ ತಾಯಿ ಚೈತ್ರಳಿಗೆ ಹಳೇಬೀಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದರು ಎಂದರೆ ನನ್ನ ತಂಗಿ ಚೈತ್ರಳಿಗೆ ಯಾವುದೇ ಕಾಯಿಲೆ ಇರಲಿಲ್ಲ. ನಮ್ಮ ತಾಯಿ ಚೈತ್ರಳನ್ನು ಹಳೇಬೀಡು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ನನಗೆ ತಿಳಿದಿಲ್ಲ. ಮಹಾಲಯ ಅಮವಾಸ್ಯೆ ಹಬ್ಬ ಆಚರಿಸಲು ಚೈತ್ರ ಗಂಡನ ಮನೆಗೆ ಹೋಗಿದ್ದಳು ಎಂದರೆ ಸರಿ. ಹಬ್ಬದ ಒಂದು ದಿನ ಮೊದಲು ಸಹ 1ನೇ ಆರೋಪಿ ಜಗದೀಶ್ ಉಬ್ಬಸ ಕಾಯಿಲೆಯಿಂದ ಬಳಲುತ್ತಿದ್ದ ಚೈತ್ರಳನ್ನು ಹಳೇಬೀಡು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ವಾಪಸ್ ಕರೆದುಕೊಂಡು ಬಂದಿರುತ್ತಾನೆ ಎಂದರೆ ಸರಿಯಲ್ಲ. 2019 ರಲ್ಲಿ ನಮ್ಮ ಮನೆಯಲ್ಲಿ ಮಹಾಲಯ ಅಮವಾಸ್ಯೆಯ ಹಬ್ಬ ಮಾಡಿರುತ್ತೇವೆ. ನಾನು ಕೋಡಿಹಳ್ಳಿ ಗ್ರಾಮದ ವಾಸಿ. ದಿ:30.09.2019 ರಂದು ಬೆಳಿಗ್ಗೆ ಸುಮಾರು 9 ಗಂಟೆ ಸಮಯಕ್ಕೆ ನಾವು ಆರೋಪಿಗಳ ಮನೆಗೆ ಹೋಗಿರಬಹುದು. ನಾವು ನಮ್ಮ ಎಲ್ಲಾ ಸಂಬಂಧಿಕರು ಸೇರಿ ಆರೋಪಿಗಳ ಮನೆಗೆ ಹೋಗಿರುತ್ತೇವೆ. ಹಬ್ಬದ ದಿನವೇ ಚೈತ್ರ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ಆಕೆ ಮರುದಿನ ಹಬ್ಬ ಆದ ಮೇಲೆ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ.

4. ಚೈತ್ರ 8ನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಳು. ಚೈತ್ರಳಿಗೆ ಓದು ಬರಹ ಬರುತ್ತಿತ್ತು. ಆಕೆ ಇಂಗ್ಲೀಷಿನಲ್ಲಿಯೂ ಸಹ ಬರೆಯುತ್ತಿದ್ದಳು. ಚೈತ್ರ ಆತ್ಮಹತ್ಯೆ ಮಾಡಿಕೊಳ್ಳುವ ಪೂರ್ವದಲ್ಲಿ ಡೆತ್ ನೋಟ್ ಬರೆದು ಇಟ್ಟಿದ್ದಳು. ಚೈತ್ರರವರ ಡೆತ್ ನೋಟನ್ನು ಪೊಲೀಸರಿಗೆ ನೀಡಲಾಗಿರುತ್ತದೆ. ಚೈತ್ರ ಯಾವುದೇ ಡೆತ್ ನೋಟನ್ನು ಬರೆದು ಇಟ್ಟಿರಲಿಲ್ಲ ಎಂದರೆ ಸರಿಯಲ್ಲ. ಚೈತ್ರ ರವರ ಡೆತ್ ನೋಟ್ ಬಗ್ಗೆ ಸೃಷ್ಟಿಸಿ ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನಾನು ಆರೋಪಿಗಳ ಊರಿಗೆ ಹೋಗುವಷ್ಟರಲ್ಲಿ ಚೈತ್ರಳ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿತ್ತು ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಗಂಡ ನೇರವಾಗಿ ಹಳೇಬೀಡು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ನಾವು ನೇರವಾಗಿ ಆರೋಪಿಗಳ ಮನೆಗೆ ಹೋಗಿರುತ್ತೇವೆ. ಚೈತ್ರಳ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿದ ನಂತರ ನಾವು ಆಸ್ಪತ್ರೆಗೆ ಹೋಗಿರುತ್ತೇವೆ. ಚೈತ್ರಳ ಮೃತದೇಹವನ್ನು ಮಧ್ಯಾಹ್ನ 12 ರಿಂದ 12.30 ಗಂಟೆಯಲ್ಲಿ ಆಸ್ಪಪತ್ರೆಗೆ ತೆಗೆದುಕೊಂಡು ಹೋಗಿರಬಹುದು. ಚೈತ್ರ 1ನೇ ಆರೋಪಿತನ ಸ್ವಂತ ಅತ್ತೆಮಗಳಾದ ಕಾರಣ ಆರೋಪಿಗಳು ಯಾವುದೇ ವರದಕ್ಷಿಣೆ ಕೇಳದೆ ವರದಕ್ಷಿಣೆ ಪಡೆಯದೆ 1ನೇ ಆರೋಪಿಯ ವಿವಾಹವನ್ನು ಚೈತ್ರಳ ಜೊತೆ ನೆರವೇರಿಸಿದ್ದರು ಎಂದರೆ ಸರಿಯಲ್ಲ. ಹಳೇ ಸಂಬಂಧ ಮುಂದುವರಿಯಲಿ ಎನ್ನುವ ಉದ್ದೇಶದಿಂದ 3ನೇ ಆರೋಪಿ ಪುಟ್ಟೇಗೌಡರು ಅವರ ಮಗನ ವಿವಾಹವನ್ನು ಚೈತ್ರಳ ಜೊತೆ ಮಾಡಿದ್ದರು ಎಂದರೆ ಸರಿಯಲ್ಲ. ದುರುದ್ದೇಶದಿಂದ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚೈತ್ರ ಆಕೆಯ ಅನಾರೋಗ್ಯದ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿದ್ದರೂ ಸಹ ಆರೋಪಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲ್ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.